92

# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.501/2016/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು,ದಿನಾಂಕ: 17.4.2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ನೆಲಮಂಗಲ ತಾಲ್ಲೂಕು ಎಡೆಹಳ್ಳಿ ಗ್ರಾಮದ ಸರ್ವೆ ನಂ. 61ರಲ್ಲಿ ಖಾಸಗಿ ಕಂಪನಿಯವರು ಅನಧಿಕೃತವಾಗಿ ಅತಿಕ್ರಮಿಸಿಕೊಂಡಿರುವ 4 ಎಕರೆ ಜಮೀನನ್ನು ಪತ್ತೆ ಮಾಡಿ ಅದನ್ನು ಪುನ: ಸರ್ಕಾರದ ವಶಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಲು ಕೋರಿ.

*******

ಶ್ರೀ ಎನ್.ಕೆ.ರಾಜು, ನಿಡವಂಡ ಗ್ರಾಮದ ನಿವಾಸಿ, ನೆಲಮಂಗಲ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಎಂ.ಸಿ.ನರಸಿಂಹಮೂರ್ತಿ, ತಹಶೀಲ್ದಾರ್, (2) ಶ್ರೀ ಪರಮೇಶ್ವರ ರಾಜು, ಉಪ ತಹಶೀಲ್ದಾರ್, (3) ಶ್ರೀ ವೆಂಕಟಸ್ವಾಮಿ, ಕಂದಾಯ ನಿರೀಕ್ಷಕರು.1, ಹಾಗೂ (4) ಶ್ರೀಮತಿ ಶೋಭಾ ಪಾಲೇಕರ್, ಗ್ರಾಮಲೆಕ್ಕಿಗರು, ಎಡೆಹಳ್ಳಿ ವೃತ್ತ, ಸೋಮಪುರ ಹೋಬಳಿ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ ಕ್ರಮವಾಗಿ 1 ರಿಂದ 4ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ನೆಲಮಂಗಲ ತಾಲ್ಲೂಕು ಎಡೆಹಳ್ಳಿ ಗ್ರಾಮದ ಸರ್ವೆ ನಂ.61 ಕ್ಷೇತ್ರ 26 ಎಕರೆ ಜಮೀನು ಸರ್ಕಾರಿ ಗೋಮಾಳವಿದ್ದು,ಇದರಲ್ಲಿ 4 ಎಕರೆ ಜಮೀನನ್ನು ಕಾನೂನುಬಾಹಿರವಾಗಿ, ಸರ್ಕಾರದ ನಿಯಮಗಳನ್ನು ಉಲ್ಲಂಘಿಸಿ, ಖಾಸಗಿ ಕಾರ್ಖಾನೆಯವರು ಅತಿಕ್ರಮಿಸಿರುತ್ತಾರೆ.ಈ ಒತ್ತುವರಿಯಾದ ಜಮೀನನ್ನು ಮರಳಿ ಪಡೆಯುವಂತೆ ಎದುರುದಾರರಿಗೆ ಅರ್ಜಿ ಸಲ್ಲಿಸಿದರೂ ಸಹಾ ಭೂಗಳ್ಳರ ಜೊತೆ ಷಾಮೀಲಾಗಿ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಿ ಎದುರುದಾರರ ವಿರುದ್ದ ಕ್ರಮಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ.

೯೩

3. 1ರಿಂದ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸರ್ವೆ ನಂ.61 ಒಟ್ಟು ವಿಸ್ತೀರ್ಣ 26 ಎಕರೆ 6 ಗುಂಟೆ ಇದ್ದು ಇದು ಸರ್ಕಾರಿ ಗೋಮಾಳವೆಂದು ವರ್ಗೀಕೃತಗೊಂಡಿರುತ್ತದೆ.ಈ ಜಮೀನನ್ನು ಕೆ.ಐ.ಡಿ.ಬಿ.ಕಾಯ್ದೆ ಕಲಂ.3(1)ರ ಪ್ರಕಾರ ಭೂ ಸ್ವಾಧೀನ ಪಡಿಸಿಕೊಳ್ಳಲಾಗಿರುತ್ತದೆ. ಆದರೆ ಆನಂತರ ಸರ್ಕಾರದ ಅಧಿಸೂಚನೆ ಸಂ: ಸಿಐ 172 ಎಸ್‌ಪಿಕ್ಯೂ 92 ದಿ.30.10.1992ರಂದು ಅಂತಿಮ ಅಧಿಸೂಚನೆ ಹೊರಡಿಸಿದ್ದು, ಅದರಲ್ಲಿ ಸರ್ವೆ ನಂ.61ರಲ್ಲಿ ಹೊನ್ನಗಂಗಯ್ಯ ತಂದೆ ಕರಿಯಪ್ಪನ 2 ಎಕರೆ ಜಮೀನು ಮತ್ತು ನರಸಿಂಹಯ್ಯನ 2 ಎಕರೆ ಜಮೀನು ಮಾತ್ರ ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ. ಆದರೆ ಖಾಸಗಿ ಕಾರ್ಖಾನೆಗೆ ಕೇವಲ 2 ಗುಂಟೆ ಜಮೀನು ಮಾತ್ರ ಅನಧಿಕೃತವಾಗಿ ಒತ್ತುವರಿಯಾಗಿರುತ್ತದೆ. ಈ 2 ಗುಂಟೆ ಪ್ರದೇಶವನ್ನು ತೆರವುಗೊಳಿಸಿ ಸರ್ಕಾರದ ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ದೂರುದಾರರು ಸರ್ವೆ ನಂ.61ರ ಸ್ಕೆಚ್‌ನ ಜೆರಾಕ್ಸ್ ಪ್ರತಿ ಲಗತ್ತಿಸಿದ್ದು, ಅದನ್ನು ಪರಿಶೀಲಿಸಲಾಗಿ ಸರ್ವೆ ನ.61ರಲ್ಲಿ 4 ಎಕರೆ ಪ್ರದೇಶ ಒತ್ತುವರಿಯಾಗಿ ಕಾರ್ಖಾನೆಗಳನ್ನು ನಿರ್ಮಿಸಿಕೊಂಡಿದ್ದು, ಆದರೆ ಈ ಪ್ರದೇಶ ಭೂಸ್ವಾಧೀನಕ್ಕೆ ಸೇರಿರುವುದಿಲ್ಲ, ಸದರಿ ಸರ್ವೆ ನಂ.61ರಲ್ಲಿ ಕೆ.ಐ.ಎ.ಡಿ.ಬಿ. ಅವರು ಒತ್ತುವರಿಯಾಗಿರುವುದಾಗಿ ಗುರ್ತಿಸುವ ಪ್ರದೇಶ ಭೂಸ್ವಾಧೀನವಾದ ಬಗ್ಗೆ ಪರಿಶೀಲಿಸಬೇಕಾಗುತ್ತದೆಂದು ಸರ್ವೆಯರ್ ಅವರು ಸ್ಕೆಚ್‌ನಲ್ಲಿ ನಮೂದಿಸಿರುತ್ತಾರೆ. ಈ ಸ್ಕೆಚ್‌ನೊಂದಿಗೆ ವಿವರವಾದ ವರದಿಯನ್ನು ಲಗತ್ತಿಸಲಾಗಿರುತ್ತದೆ. ಆದರೆ ಎದುರುದಾರರು ಈ ಸ್ಕೆಚ್ ಬಗ್ಗೆ ಏನೂ ಹೇಳದೆ ಕೇವಲ 2 ಗುಂಟೆ ಮಾತ್ರ ಖಾಸಗಿ ಕಾರ್ಖಾನೆಗಳಿಗೆಒತ್ತುವರಿಯಾಗಿದ್ದು,ಅದನ್ನು ತೆರವುಗೊಳಿಸಲಾಗಿದೆಯೆಂದು ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ.

6. ಆದ್ದರಿಂದ ಎದುರುದಾರರು ಖಾಸಗಿ ಕಾರ್ಖಾನೆಯವರು ಅನಧಿಕೃತವಾಗಿ ಒತ್ತುವರಿ ಮಾಡಿದ ಜಮೀನನ್ನು ಗುರುತಿಸಿ, ಅದನ್ನು ವಶಪಡಿಸಿಕೊಳ್ಳದೆ, ಕೇವಲ 2 ಗುಂಟೆ ಮಾತ್ರ ಅನಧಿಕೃತವಾಗಿ ಒತ್ತುವರಿಯಾಗಿದ್ದು, ಅದನ್ನು ತೆರವುಗೊಳಿಸಲಾಗಿದೆಯೆಂದು ತಮ್ಮ ಆಕ್ಷೇಪಣೆಯಲ್ಲಿ ತಿಳಿಸಿರುತ್ತಾರೆ. ಆದರೆ ಎದುರುದಾರರು ನಿಜವಾದ ಒತ್ತುವರಿಯನ್ನು ಮರೆಮಾಚಿ ಸುಳ್ಳು ಆಕ್ಷೇಪಣೆ ಸಲ್ಲಿಸಿರುತ್ತಾರೆಂದು

ಕಂಡುಬರುತ್ತದೆ. ಆದ್ದರಿಂದ ಎದುರುದಾರರು ಯಾವುದೋ ಆಮಿಷಕ್ಕೊಳಗಾಗಿ ಖಾಸಗಿ ಕಾರ್ಖಾನೆಯವರು ಅನಧಿಕೃತವಾಗಿ ಬೆಲೆಬಾಳುವ ಜಮೀನನ್ನು ಒತ್ತುವರಿಮಾಡಿಕೊಂಡಿದ್ದಾರೆಂಬ ದಾಖಲೆ ಸಹಿತ ಸಾರ್ವಜನಿಕರು ಅರ್ಜಿ ಸಲ್ಲಿಸಿದಾಗ ಯಾವುದೇ ಕ್ರಮಜರುಗಿಸದೆ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ನೆಲಮಂಗಲ ತಾಲ್ಲೂಕು, ಎಡೆಹಳ್ಳಿ ಗ್ರಾಮದ ಸರ್ವೆ ನಂ. 61ರಲ್ಲಿ ಖಾಸಗಿ ಕಂಪನಿಯವರು ಅನಧಿಕೃತವಾಗಿ ಅತಿಕ್ರಮಿಸಿಕೊಂಡಿರುವ 4 ಎಕರೆ ಜಮೀನನ್ನು ಪತ್ತೆ ಮಾಡಿ ಅದನ್ನು ಪುನ: ಸರ್ಕಾರದ ವಶಕ್ಕೆ ಪಡೆಯಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 17/4/17.

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

17/4